# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್ ಎಮ್.ವೈ.ಎಸ್–9432/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,

ದಿನಾಂಕ: 02/12/2019.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ತ್ರಾಸಿ ಗ್ರಾಮದ ಸರ್ವೆ ನಂ. 151/1 ರಲ್ಲಿರುವ 7.66 ಎಕರೆ ಸರ್ಕಾರಿ ಜಮೀನಿನನ್ನು ಸಂರಕ್ಷಿಸಲು ಅಕ್ರಮ ಸ್ವಾಧೀನ ಹೊಂದಿದವರ ವಿರುದ್ಧ ನಿಯಮಾನುಸಾರ ಸಂಬಂಧಪಟ್ಟವರಿಗೆ ನ್ಯಾಯೋಚಿತವಾಗಿ ಅವಕಾಶ ಕಲ್ಪಿಸಿ ಕಾನೂನು ರೀತ್ಯಾ ಕ್ರಮ ಜರುಗಿಸಿ ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸುವ ಕುರಿತು.

*****

1. ಶ್ರೀ ಸಂಜೀವ್ ಗಾಣಿಗ, ಅರ್ಚಕರು, ಶ್ರೀ ಅಂಬಾಭವಾನಿ ದೇವಸ್ಥಾನ, ಮೊವಾಡಿ, ತ್ರಾಸಿ ಅಂಚೆ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು (1) ತಹಶೀಲ್ದಾರರು, ತಾಲ್ಲೂಕು ಕಛೇರಿ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ, (2) ಶಾಖಾಧಿಕಾರಿ, ಮೆಸ್ಕಾಂ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಮತ್ತು (3) ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ತ್ರಾಸಿ ಗ್ರಾಮ ಪಂಚಾಯತ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರುಗಳ ವಿರುದ್ಧ ದೂರು ಸಲ್ಲಿಸಿ ತನಿಖೆ ಕೈಗೊಳ್ಳಲು ಕೋರಿರುತ್ತಾರೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ).

2. ದೂರಿನ ಸಂಕ್ಷಿಪ್ತ ಸಾರಾಂಶ:

ಪಿರ್ಯಾದುದಾರರು ತ್ರಾಸಿ ಗ್ರಾಮದ ಮೊವಾಡಿಯಲ್ಲಿರುವ ಶ್ರೀ ಅಂಬಾದೇವಿ ದೇವಸ್ಥಾನದ ಅರ್ಚಕರಿರುತ್ತಾರೆ. ಸುಮಾರು 30 ವರ್ಷಗಳಿಂದ ಈ ಭೂಮಿಯಲ್ಲಿ ದೇವಸ್ಥಾನ ಇರುವ ಬಗ್ಗೆ ಸರ್ಕಾರಕ್ಕೆ ತಿಳಿಸಿರುತ್ತಾರೆ. ದೇವಸ್ಥಾನದ ಕಟ್ಟಡಕ್ಕೆ ಮತ್ತು ಉತ್ಸವದ ಆಚರಣೆಗಾಗಿ ಸರ್ವೆ ನಂ. 151/1 ರಲ್ಲಿರುವ ಸರ್ಕಾರಿ ಭೂಮಿ ನೀಡಲು ಜಿಲ್ಲಾಧಿಕಾರಿಯವರಿಗೆ ಮನವಿಯನ್ನು ಮಾಡಿದ್ದು, ಆ ಮೂಲಕ ದೇವಸ್ಥಾನಕ್ಕೆ 2.00 ಎಕರೆ ಜಾಗವನ್ನು ಕಾದಿರಿಸುವಂತೆ ಸಂಬಂಧಪಟ್ಟ ಇಲಾಖೆಗೆ ಜಿಲ್ಲಾಧಿಕಾರಿಯವರು ಆದೇಶಿಸಿರುತ್ತಾರೆ. ಆದರೆ ಈವರೆಗೂ ಇದರ ಸರ್ವೆಯನ್ನು ಮಾಡಿರುವುದಿಲ್ಲ. ಖಾಸಗಿ ವ್ಯಕ್ತಿಯೊಬ್ಬರು ಈ ಸ್ಥಳದಲ್ಲಿ ಬೇರೆ ದಾಖಲಾತಿ ನೀಡಿ ಪಂಚಾಯತ್‌ನಿಂದ ಅನುಮತಿ ಪಡೆದು, ಈ ಸ್ಥಳದಲ್ಲಿ ಕೊಳವೆ ಬಾವಿ, ವಿದ್ಯುತ್ ಸಂಪರ್ಕ ಹಾಗೂ ಕೃಷಿ ಚಟುವಟಿಕೆ ನಡೆಸುತ್ತಿದ್ದಾರೆ. ಇದರ ಕುರಿತು ಸಂಬಂಧಪಟ್ಟ ಪಂಚಾಯತ್‌ಗೆ ಮಾಹಿತಿ ನೀಡಿದರೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಕಾನೂನು ತನಿಖೆ ನಡೆಸಿ ನ್ಯಾಯ ಒದಗಿಸಬೇಕಾಗಿ ಕೋರಿರುತ್ತಾರೆ.

ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

3. 1ನೇ ಎದುರುದಾರರ ಆಕ್ಷೇಪಣೆಗಳು:

ಮೊವಾಡಿ, ತ್ರಾಸಿ ಅಂಚೆ, ಸರ್ವೆ ನಂ. 151/1 ರಲ್ಲಿ 7.66 ಎಕರೆ ಸ್ಥಳವು ಈ ಹಿಂದೆ ಪ್ರತ್ಯೇಕ 5 ಜನರಿಗೆ ಸರ್ಕಾರದಿಂದ ಆರ್.ಡಿ. 4567/58, ದಿನಾಂಕ: 14/08/1958 ರಲ್ಲಿ 30 ವರ್ಷಗಳಿಗೆ ಗೇರು ಬೆಳೆಯುವ ಉದ್ದೇಶಕ್ಕೆ ಲೀಸ್‌ಗೆ ನೀಡಿರುವ ಜಮೀನಾಗಿದ್ದು ಗೇರು ಲೀಸ್ ಅವಧಿ ಮುಕ್ತಾಯಗೊಂಡಿರುತ್ತದೆ. ಗೇರು ಲೀಸು ಪಡೆದುಕೊಂಡಿರುವ ಪೈಕಿ ರಾಘವೇಂದ್ರ ಭಟ್ ಎನ್ನುವವರಿಗೆ 3.76 ಎಕರೆ ಗೇರು ಲೀಸಿನ ಸ್ಥಳ ನೀಡಿದ್ದು ಸದರಿ ಸ್ಥಳದಲ್ಲಿ ಗೇರು ಕೃಷಿ ಇದ್ದು, ಅಂಬಾದೇವಿ ಹೆಸರಿನ ದೇವಸ್ಥಾನದ ಒಂದು ಕಟ್ಟಡ ಇರುತ್ತದೆ. ಇತ್ತೀಚೆಗೆ ಸುಮಾರು 6–7 ತಿಂಗಳ ಹಿಂದೆ ಒಂದು ಕೊಳವೆ ಬಾವಿ ಕೊರೆದು ವಿದ್ಯುತ್

ಸಂಪರ್ಕ ಪಡೆದುಕೊಂಡಿರುತ್ತಾರೆ. ಕೊಳವೆ ಬಾವಿ ಕೊರೆಯಲು ಸ್ಥಳೀಯ ಗ್ರಾಮ ಪಂಚಾಯತ್‌ನಿಂದ ಅನುಮತಿ ಪಡೆಯುವುದು ಅಗತ್ಯವಿರುತ್ತದೆ. ದೂರುದಾರರು ಕೋರಿರುವ ಜಮೀನು ಗೇರು ಲೀಸ್‌ನ ಜಮೀನಾಗಿರುತ್ತದೆ. ಅಲ್ಲದೇ ಖಾಸಗಿ ದೇವಸ್ಥಾನಕ್ಕೆ ಜಮೀನು ಕಾದಿರಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ ಎಂದು ನಮೂದಿಸಿರುತ್ತಾರೆ.

4. 2ನೇ ಎದುರುದಾರರ ಆಕ್ಷೇಪಣೆಗಳು:

ದಿನಾಂಕ: 02/06/2018 ರಿಂದ ಗಂಗೊಳ್ಳಿ ಶಾಖೆಯಲ್ಲಿ ಶಾಖಾಧಿಕಾರಿ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದೇನೆ. ಸರ್ವೆ ನಂ. 148 ರಲ್ಲಿ ಶ್ರೀ ರಾಘವೇಂದ್ರ ಭಟ್ ಮೂವಾಡಿ ಇವರು 5 ಅಶ್ವಶಕ್ತಿ ನೀರಾವರಿ ಪಂಪ್‌ಸೆಟ್ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ಜೊತೆಗೆ ಆರ್.ಟಿ.ಸಿ., ಪ್ರತಿ, ಸರ್ವೆ ನಂ. 148/2ಬಿ ರಲ್ಲಿ ಬೋರ್‌ವೆಲ್ ಕೊರೆಯುವ ಬಗ್ಗೆ ಗ್ರಾಮ ಪಂಚಾಯತ್ ತ್ರಾಸಿಯಿಂದ ಪಡೆದಿರುವ ಅನುಮತಿ ಪತ್ರ, ಬೋರ್‌ವೆಲ್ ಪಾಯಿಂಟ್ ಗುರುತಿಸಿದ ಗ್ರಾಮ ಲೆಕ್ಕಾಧಿಕಾರಿಯವರಿಂದ ಪಡೆದಿರುವ ದೃಢೀಕರಣ ಪತ್ರಗಳನ್ನು ಸಲ್ಲಿಸಿರುತ್ತಾರೆ.

ನಿಯಮಾನುಸಾರ ಕಂಬಗಳನ್ನು ಅಳವಡಿಸುವ ಅಂದಾಜು ಪತ್ರಿಕೆ ತಯಾರಿಸಿ ಮಂಜೂರಾತಿ ಪಡೆದು ದಿನಾಂಕ: 21/11/2017 ರಂದು ವಿದ್ಯುತ್ ಸಂಪರ್ಕ ನೀಡಲಾಗಿರುತ್ತದೆ. ವಿದ್ಯುತ್ ಸಂಪರ್ಕ ನೀಡುವಾಗ ಶಾಖಾಧಿಕಾರಿಯವರ ಹುದ್ದೆಯನ್ನು ಶ್ರೀ ರಾಘವೇಂದ್ರ ಎನ್, ಶಾಖಾಧಿಕಾರಿ–11, ಕಾರ್ಯ ಮತ್ತು ಪಾಲನಾ ಶಾಖೆ, ಕುಂದಾಪುರ ರವರು ನಿರ್ವಹಿಸುತ್ತಿದ್ದರು ಎಂದು ನಮೂದಿಸಿರುತ್ತಾರೆ.

5. 3ನೇ ಎದುರುದಾರರ ಆಕ್ಷೇಪಣೆಗಳು:

ಸರ್ವೆ ನಂ. 151/1ರ ಸರ್ಕಾರಿ ಭೂಮಿಯೆಂದು ತಿಳಿಸಿದ್ದು ಕಂದಾಯ ಇಲಾಖೆಗೆ ಸಂಬಂಧಿಸಿರುವುದಾಗಿದೆ. ಪಿರ್ಯಾದುದಾರರ ದೂರು ಸತ್ಯಕ್ಕೆ ದೂರವಾಗಿರುವುದರಿಂದ ತನಿಖೆ ಮುಕ್ತಾಯ ಮಾಡಬೇಕೆಂದು ಕೋರಿರುತ್ತಾರೆ.

6. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ.

7. ತ್ರಾಸಿ ಗ್ರಾಮದ ಸರ್ವೆ ನಂ. 151/1 ರಲ್ಲಿ ಒಟ್ಟು 7.66 ಎಕರೆ ಜಮೀನಿದ್ದು 2017–18ನೇ ಸಾಲಿನ ಆರ್.ಟಿ.ಸಿ. ಪ್ರತಿಯ ಕಾಲಂ 9 ಮತ್ತು 12 ರಲ್ಲಿ ಸರ್ಕಾರ ಎಂದು ನಮೂದಿಸಿರುವುದು ಕಂಡುಬಂದಿರುತ್ತದೆ. ಸದರಿ ಜಮೀನನ್ನು 1958 ರಲ್ಲಿ 5 ಜನರಿಗೆ ಸರ್ಕಾರದಿಂದ ಗೇರು ಬೆಳೆಯುವ ಉದ್ದೇಶಕ್ಕೆ 30 ವರ್ಷಗಳಿಗೆ ಗೇರು ಲೀಸು ನೀಡಿದ್ದು 1988 ಕ್ಕೆ ಲೀಜ್ ಅವಧಿ ಮುಕ್ತಾಯವಾಗಿದ್ದು ಹಾಲಿ ಆರ್.ಟಿ.ಸಿ. ದಾಖಲೆಯ ಪ್ರಕಾರ ಜಮೀನಿನ ಸ್ವಾಧೀನ ಸರ್ಕಾರದ್ದಿರುವುದು ಕಂಡುಬಂದಿರುತ್ತದೆ.

8. ಪಿರ್ಯಾದುದಾರರು ಅನೇಕ ಮನವಿ ಪತ್ರಗಳನ್ನು ನೀಡಿ ಸರ್ವೆ ನಂ. 151/1 ರಲ್ಲಿರುವ 2 ಎಕರೆ ಭೂಮಿಯು ಶ್ರೀ ದುರ್ಗಾಂಬಾ ದೇವಸ್ಥಾನದ ಸ್ವಾಧೀನದಲ್ಲಿದ್ದು ಸದರಿ 2 ಎಕರೆ ಜಮೀನನ್ನು ದೇವಸ್ಥಾನದ ಹೆಸರಿಗೆ ದಾಖಲಿಸಲು ಕೋರಿರುತ್ತಾರೆ. ಖಾಸಗಿ ದೇವಸ್ಥಾನಕ್ಕೆ ಜಮೀನು ಕಾದಿರಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲವೆಂದು 1 ನೇ ಎದುರುದಾರರು ಆಕ್ಷೇಪಣೆಗಳಲ್ಲಿ ನಮೂದಿಸಿರುತ್ತಾರೆ.

9. ಸದರಿ ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ಬೋರ್‌ವೆಲ್ ಕೊರೆದು ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆದಿರುವುದಾಗಿ ದೂರಿನಲ್ಲಿ ಆರೋಪಿಸಿರುತ್ತಾರೆ.

10. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಬೋರ್‌ವೆಲ್ ಪಾಯಿಂಟ್ ಗುರುತಿಸಿ ಧೃಡೀಕರಣ ಪತ್ರ ನೀಡಿದ ಆಧಾರದ ಮೇಲೆ ಸರ್ವೆ ನಂ. 148 ರಲ್ಲಿರುವ ಬೋರ್‌ವೆಲ್‌ಗೆ ವಿದ್ಯುತ್ ಸಂಪರ್ಕ ನೀಡಿರುವುದಾಗಿ ನಮೂದಿಸಿರುತ್ತಾರೆ.

11. ಶ್ರೀ ದುರ್ಗಾಂಬ ದೇವಸ್ಥಾನದ ಅಧ್ಯಕ್ಷರು/ ಕಾರ್ಯದರ್ಶಿಗಳು ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸಿ ಸರ್ವೆ ನಂ. 151/1 ರಲ್ಲಿ ದಿನಾಂಕ: 18/10/2004 ರಿಂದ 17/10/2005 ರವರೆಗೆ ಕಟ್ಟಡ ಕಟ್ಟಲು ಅಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಪರವಾನಗಿ ನೀಡಿರುತ್ತಾರೆ.

12. 2017-18ನೇ ಸಾಲಿನ ಆರ್.ಟಿ.ಸಿ. ಪ್ರತಿಯ ಆಧಾರಗಳಿಂದ ಸರ್ವೆ ನಂ. 151/1 ರಲ್ಲಿ ಒಟ್ಟು 7.66 ಎಕರೆ ಜಮೀನು ಸರ್ಕಾರದ ಸ್ವಾಧೀನದಲ್ಲಿದ್ದು ಸರ್ಕಾರದ ಜಮೀನಾಗಿರುತ್ತದೆ. ಗೇರು ಲೀಸ್ ಅವಧಿ 1988 ಕ್ಕೆ ಮುಕ್ತಾಯವಾಗಿದ್ದು ನಂತರ ಸದರಿ ಜಮೀನನ್ನು ಸರ್ಕಾರದಿಂದ ಯಾರಿಗೂ ಮಂಜೂರಾಗಿರುವ ಬಗ್ಗೆ ಆಧಾರಗಳು ಲಭ್ಯವಾಗಿರುವುದಿಲ್ಲ. ಖಾಸಗೀ ದೇವಸ್ಥಾನಕ್ಕೆ ಮಂಜೂರು ಮಾಡಲು ನಿಯಮವಿರುವುದಿಲ್ಲವೆಂದು 1ನೇ ಎದುರುದಾರರು ಹೇಳಿದ್ದಾರೆ. ಸರ್ವೆ ನಂ. 151/1 ರಲ್ಲಿರುವ ಸರ್ಕಾರದ ಸ್ವತ್ತನ್ನು ಸಂರಕ್ಷಿಸುವ ಅಗತ್ಯತೆ ಸಾರ್ವಜನಿಕ ದೃಷ್ಟಿಯಿಂದ ಕಂಡುಬಂದಿರುತ್ತದೆ.

13. ಮೇಲೆ ನಮೂದಿಸಿದ ಕಾರಣಗಳಿಂದ ಹಾಗೂ ಕಡತದಲ್ಲಿನ ಆಧಾರಗಳಿಂದ, ತ್ರಾಸಿ ಗ್ರಾಮದ ಸರ್ವೆ ನಂ. 151/1 ರಲ್ಲಿರುವ 7.66 ಎಕರೆ ಸರ್ಕಾರಿ ಜಮೀನನ್ನು ಸಂರಕ್ಷಿಸಲು ಅಕ್ರಮ ಸ್ವಾಧೀನ ಹೊಂದಿದವರ ವಿರುದ್ಧ ನಿಯಮಾನುಸಾರ ಸಂಬಂಧಪಟ್ಟವರಿಗೆ ನ್ಯಾಯೋಚಿತವಾಗಿ ಅವಕಾಶ ಕಲ್ಪಿಸಿ ಕಾನೂನು ರೀತ್ಯಾ ಕ್ರಮ ಜರುಗಿಸಿ ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸುವಂತೆ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

14. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

10/12/19

[ನ್ಯಾಯಮೂರ್ತಿ ಬಿ.ಎಸ್. ಪಾಟೀಲ್]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.